ವಿದ್ಯುತ್ ಸರಬರಾಜು ಪಡೆದು ಯಂತ್ರೋಪಕರಣಗಳನ್ನು ಚಾಲೂಗೊಳಿಸಿ ಕೊಳವೆ ಮಾರ್ಗವನ್ನು ಒತ್ತಡ ಪರೀಕ್ಷೆಗೆ ಒಳಪಡಿಸಿ ನೀರು ಸರಬರಾಜು ಮಾಡಲಾಗುವುದು. ಈ ಯೋಜನೆಯನ್ನು ಜೂನ್ : ಜುಲೈ 2000ದ ವೇಳೆಗೆ ಕಾರ್ಯಗತ ಗೊಳಿಸಬಹುದು.

ಹಾಸನ ಜಿಲ್ಲೆಯಲ್ಲಿ ಅನುದಾನದಲ್ಲಿ ಒಳಪಡುವ ಮೆಟ್ರಿಕ್ ಪೂರ್ವ ಬಾಲಕರ : ಬಾಲಕಿಯರ ನಿಲಯಗಳಿಷ್ಟು

1639 (1889) : ಶ್ರೀ ಪುಟ್ಟರಂಗನಾಥ್. ಎಸ್. ಹೆಚ್. (ಬೇಲೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಾಸನ ಜಿಲ್ಲೆಯಲ್ಲಿ ಅನುದಾನಕ್ಕೆ ಒಳಪಡುವ ಮೆಟ್ರಿಕ್ ಮತ್ತು ಮೆಟ್ರಿಕ್ ಪೂರ್ವ ಬಾಲಕ : ಬಾಲಕಿಯರ ನಿಲಯಗಳೆಷ್ಟು; ಕಾಲೇಜು ವಿದ್ಯಾರ್ಥಿನಿಲಯಗಳೆಷ್ಟು; ವಿವರ ನೀಡುವುದು;

(ಆ) ಇಲಾಖೆಯ ವತಿಯಿಂದ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಹಾಸನ ಜಿಲ್ಲೆಯಲ್ಲಿ 12 ಮೆಟ್ರಿಕ್ ಪೂರ್ವ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳು ಇವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಜಿಲ್ಲೆಯಲ್ಲಿ ಯಾವುದೇ ಅನುದಾನಿತ ಕಾಲೇಜು ವಿದ್ಯಾರ್ಥಿನಿಲಯಗಳು ಇರುವುದಿಲ್ಲ.

(ಆ) ಸಮಾಜ ಕಲ್ಯಾಣ ಇಲಾಖೆವತಿಯಿಂದ 55 ಮೆಟ್ರಿಕ್ ಪೂರ್ವ ಮತ್ತು 7 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು, ಹಿಂದುಳಿದ ವರ್ಗಗಳ ಇಲಾಖೆವತಿಯಿಂದ 56 ಮೆಟ್ರಿಕ್ ಪೂರ್ವ ಮತ್ತು 8 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ಅನುಬಂಧ

ಹಾಸನ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿವರಗಳು:-

ಹಿಂದುಳಿದ ವರ್ಗದವರಿಗಾಗಿ:-

1. ಶ್ರೀ. ಮಲ್ಲಿಕಾರ್ಜುನಸ್ವಾಮಿ ಸಾರ್ವಜನಿಕ ವಿದ್ಯಾರ್ಥಿನಿಲಯ, ಯಡವನಹಳ್ಳಿ, ಅರಸೀಕೆರೆ ತಾಲ್ಲೂಕು.
2. ಶ್ರೀ. ಶಿವನಂಜುಂಡೇಶ್ವರ ಸಾರ್ವಜನಿಕ ಪ್ರಸಾದನಿಲಯ, ಕಣೆಕಟ್ಟೆ, ಅರಸೀಕೆರೆ ತಾಲ್ಲೂಕು.
3. ಶ್ರೀ. ಶಿವನಂಜುಂಡೇಶ್ವರ ಪ್ರಸಾದನಿಲಯ, ಅರಳೀಕಟ್ಟೆ, ಅರಸೀಕೆರೆ ತಾಲ್ಲೂಕು.
4. ಶ್ರೀ. ಜಗದ್ಗುರು ಶಿವಲಿಂಗೇಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯ, ಕೋಡಿಮಠ, ಅರಸೀಕೆರೆ ತಾಲ್ಲೂಕು.

5. ಶ್ರೀ. ರುದ್ರಮುನಿ ಪ್ರಸಾದನಿಲಯ, ನಾಗೇನಹಳ್ಳಿ, ಅರಸೀಕೆರೆ ತಾಲ್ಲೂಕು.

6. ಶ್ರೀ. ಬಸವೇಶ್ವರ ಸಾರ್ವಜನಿಕ ಪ್ರಸಾದನಿಲಯ,ಬಿಂಡೇಕೆರೆ, ಅರಸೀಕೆರೆ ತಾಲ್ಲೂಕು.

7. ಶ್ರೀ. ಚನ್ನಬಸವೇಶ್ವರ ಸಾರ್ವಜನಿಕ ಪ್ರಸಾದನಿಲಯ, ಮೂದಾಳು, ಅರಸೀಕೆರೆ ತಾಲ್ಲೂಕು.

8. ಜನತಾ ಸಾರ್ವಜನಿಕ ವಿದ್ಯಾರ್ಥಿನಿಲಯ, ಹಗ್ಗುಂದ, ಹಾಸನ.

9. ಶ್ರೀ. ಪುಷ್ಪಗಿರಿ ವಿದ್ಯಾರ್ಥಿನಿಲಯ, ಇಬ್ಬೇಡು, ಬೇಲೂರು.

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಿಗಾಗಿ:-

1. ಶ್ರೀ. ಕುಮಾರ ವಿದ್ಯಾಸಂಸ್ಥೆ, ಅನುದಾನಿತ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ತಗರೆ, ಬೇಲೂರು ತಾಲ್ಲೂಕು.

ಅಲ್ಪಸಂಖ್ಯಾತರಿಗಾಗಿ:-

1. ಇಯತುಲ್ಲಾ ಇಸ್ಲಾಂ ಶಿಕ್ಷಣ ವಿದ್ಯಾರ್ಥಿ ಸಂಸ್ಥೆಯ ವಿದ್ಯಾರ್ಥಿ ನಿಲಯ, ಬೇಲೂರು.

2. ಶ್ರೀ. ಗೋಮಟೇಶ್ವರ ವಿದ್ಯಾಪೀಠ ಉಚಿತ ವಿದ್ಯಾರ್ಥಿನಿಲಯ, ಶ್ರವಣ ಬೆಳಗೊಳ, ಚೆನ್ನರಾಯಪಟ್ಟಣ ತಾಲ್ಲೂಕು.

ಹುಣಸೂರು ಪಟ್ಟಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

1641 (1878) : ಶ್ರೀ ವಿ. ಪಾಪಣ್ಣ (ಹುಣಸೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹುಣಸೂರು ಪಟ್ಟಣದಲ್ಲಿ ಲಕ್ಷ್ಮಣತೀರ್ಥ ನೀರು ಕಲುಷಿತಗೊಂಡಿದ್ದು ಕುಡಿಯಲು ಯೋಗ್ಯವಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹುಣಸೂರು ಪಟ್ಟಣಕ್ಕೆ ಕೆ. ಆರ್. ನಗರದ ಬಳಿ ಹರಿಯುವ ಕಾವೇರಿ ನೀರು ತರಲು ರೂ. 10.00 ಕೋಟಿ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;

ಹಾಗಿದ್ದಲ್ಲಿ ಇದಕ್ಕೆ ಮಂಜೂರಾತಿಯಾಗಿದೆಯೇ;

ಆಗಿಲ್ಲದಿದ್ದರೆ 2000-2001ನೇ ಇಸವಿಯಲ್ಲಿ ಮಂಜೂರಾತಿ ನೀಡಲು ಉದ್ದೇಶಿಸಲಾಗಿದೆಯೇ;

(ಇ) ಹುಣಸೂರು ಪುರಸಭೆ ವ್ಯಾಪ್ತಿಯಲ್ಲಿ ಬೋರ್‌ವೆಲ್ ನೀರು ಕುಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಕುಡಿಯುವ ನೀರಿಗಾಗಿ ಈಗಿರುವ ಬೋರ್‌ವೆಲ್‌ಗಳು ಸಾಲದಿದ್ದು, ಹೆಚ್ಚು ಬೋರ್‌ವೆಲ್‌ಗಳನ್ನು ಹಾಕಲು ಕ್ರಮ ಕೈಗೊಳ್ಳಲಾಗುವುದೇ?